20-03-2020

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1597

ಸದಸ್ಯರ ಹೆಸರು : ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ)

ಕ್ರ.ಸ	ಪ್ರಶ್ನೆ	ಉತ್ತರ
ಅ	ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ವಿದ್ಯಾರ್ಥಿ ಪಾಸುಗಳು, ಅಂಗವಿಕಲರ, ಅಂಧರ, ಸ್ವಾತಂತ್ರ್ಯ ಹೋರಾಟಗಾರರ, ಹುತಾತ್ಮ ಯೋಧರ, ಗೋವಾ ವಿಮೋಚನಾ ಚಳುವಳಿಗಾರರ, ಎಂಡೋಸಲ್ಫಾನ್ ಪೀಡಿತರ, ಹಿರಿಯ ನಾಗರೀಕರಿಗೆ ರಿಯಾಯಿತಿ ದರದಲ್ಲಿ ಪಾಸುಗಳನ್ನು ವಿತರಿಸಿದ್ದಕ್ಕೆ ಸರ್ಕಾರದಿಂದ ಎಷ್ಟು ಹಣ ಸಂಸ್ಥೆಗೆ ಬಾಕಿ ಬರಬೇಕಾಗಿದೆ;	2008-09ರಲ್ಲಿ ಮಾನ್ಯ ಸಾರಿಗೆ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಟಿ.ಎನ್.ಎಸ್.ಮೋಡ್ನಲ್ಲಿ ನಿಗಧಿಪಡಿಸಿದ ದರದಂತೆ ಇತರೆ ರಿಯಾಯಿತಿ / ಉಚಿತ ಪಾಸುಗಳ ವಿತರಣೆಯ ವೆಚ್ಚವನ್ನು ಭರಿಸಲಾಗುತ್ತಿದೆ. 2014-15 ರಿಂದ ಪ್ರಯಾಣ ದರದಲ್ಲಿ ಹೆಚ್ಚಳವಾಗಿರುವುದಿಲ್ಲ. ಆದ್ದರಿಂದ, ಯಾವುದೇ ಬಾಕಿಯನ್ನು ಸಂಸ್ಥೆಗೆ ಪಾವತಿಸಲು ಬಾಕಿ ಇರುವುದಿಲ್ಲ.
ಆ	ಈ ಬಾಕಿ ಹಣವನ್ನು ಇಲ್ಲಿಯವರೆಗೂ ಸರ್ಕಾರ ಸಂಸ್ಥೆಗೆ ನೀಡದೇ ಬಾಕಿ ಉಳಿಸಿಕೊಂಡಿರುವುದಕ್ಕೆ ಕಾರಣವೇನು; ಈ ರೀತಿ ಬಾಕಿ ಹಣವನ್ನು ಕೊಡದೇ ಇರುವುದರಿಂದ ವಾ.ಕ.ರ.ಸಾ.ಸ ನಡೆಸಲು ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು;	2019-20ನೇ ಸಾಲಿನಲ್ಲಿ ನಾಲ್ಕೂ ಸಾರಿಗೆ ಸಂಸ್ಥೆಗಳಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ವಿತರಿಸಲಾದ ಉಚಿತ ಬಸ್ ಪಾಸ್‌ಗಳಿಗೆ ತಗುಲಿದ ಒಟ್ಟು ವೆಚ್ಚದಲ್ಲಿ ಕೊರತೆಯಾದ ರೂ.186.00ಕೋಟಿಗಳನ್ನು ಬಿಡುಗಡೆ ಮಾಡುವಂತೆ ಸಮಾಜ ಕಲ್ಯಾಣ ಇಲಾಖೆಯನ್ನು ಕೋರಲಾಗಿ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭಿವೃದ್ಧಿ ಪರಿಷತ್ತಿನ ಸಭೆ ದಿನಾಂಕ: 28.05.2020ರಲ್ಲಿ ಸಹಕಾರ ಇಲಾಖೆಯಿಂದ ಆಧ್ಯರ್ಪಣೆ ಮಾಡಲು ಪ್ರಸ್ತಾಪಿಸಿರುವ ರೂ.74.13ಕೋಟಿ ಅನುದಾನವನ್ನು ಸಾರಿಗೆ ಇಲಾಖೆಗೆ ಮರು ಹಂಚಿಕೆ ಮಾಡಲು ಹಾಗೂ ಇನ್ನೂ ಹೆಚ್ಚುವರಿಯಾಗಿ ಬೇಕಾಗುವ ಅನುದಾನದ ಬಗ್ಗೆ ಮುಂದಿನ ನೋಡಲ್ ಏಜೆನ್ಸಿ ಸಭೆಯಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ರೂ.74.13 ಕೋಟಿಗಳನ್ನು ಮರುಹಂಚಿಕೆ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.
ಇ	ಕೂಡಲೇ ಸರ್ಕಾರ ವಾ.ಕ.ರ.ಸಾ.ಸ. ಬಾಕಿ ನೀಡಬೇಕಾದ ಹಣವನ್ನು ನೀಡಿ ಸಂಸ್ಥೆಯನ್ನು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಕ್ರಮ ಕೈಗೊಳ್ಳುವುದೇ;	
ಈ	ಬಿ.ಎಂ.ಟಿ.ಸಿ.ಯವರಿಗೆ ಮೋಟಾರು ವಾಹನ ತೆರಿಗೆ ವಿನಾಯಿತಿ ನೀಡಿದ್ದು, ನಿಜವೇ; ನಿಜವಿದ್ದಲ್ಲಿ, ಯಾವ ದಿನಾಂಕದಿಂದ ನೀಡಲಾಗಿದೆ;	ರಾಜ್ಯ ಸರ್ಕಾರಕ್ಕೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ತನ್ನ ಸಾರಿಗೆ ಆದಾಯದ ಮೇಲೆ ಪಾವತಿಸಬೇಕಾದ ಮೋಟಾರು ವಾಹನ ತೆರಿಗೆಯನ್ನು ಉಳಿಸಿಕೊಳ್ಳಲು ಸರ್ಕಾರವು 2017-18, 2018-19 ನೇ ಸಾಲಿನಲ್ಲಿ ಅನುಮತಿ ನೀಡಿದೆ. 2019-20ನೇ ವರ್ಷದ ಮೊದಲನೇ ತ್ರೈಮಾಸಿಕ ಅವಧಿಯಲ್ಲಿ ನೀಡಬೇಕಾದ ತೆರಿಗೆಯನ್ನು ಸಹಾಯಧನದಲ್ಲಿ ಕಡಿತಗೊಳಿಸಿ ಉಳಿದ 3 ತ್ರೈಮಾಸಿಕ ಅವಧಿಯಲ್ಲಿ ಪಾವತಿಸಬೇಕಾದ ತೆರಿಗೆಯನ್ನು ಉಳಿಸಿಕೊಳ್ಳಲು ಅನುಮತಿ ನೀಡಿದೆ.
ಉ	ಸದರಿ ವ್ಯವಸ್ಥೆಯನ್ನು ವಾ.ಕ.ರ.ಸಾ.ಸಂಸ್ಥೆಗೆ ವಿಸ್ತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?	ವಾ.ಕ.ರ.ಸಾ.ಸಂಸ್ಥೆಗೆ ಮೋಟಾರು ವಾಹನ ತೆರಿಗೆ ವಿನಾಯಿತಿ ನೀಡಲು ಆರ್ಥಿಕ ಇಲಾಖೆಯು ಸಹಮತಿಸಿರುವುದಿಲ್ಲ.

ಸಂಖ್ಯೆ: ಟಿಡಿ 130 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು